# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1281 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ-275ರ ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ 2023ರ ಮಾರ್ಚ್‌ನಿಂದ ಈವರೆವಿಗೆ ಸಂಭವಿಸಿರುವ ಅಪಘಾತಗಳ ಸಂಖ್ಯೆ ಎಷ್ಟು; ಇದರಲ್ಲಿ ಗಂಭೀರವಾಗಿ ಗಾಯಗೊಂಡವರು ಮತ್ತು ಮರಣ ಹೊಂದಿದವರ ಸಂಖ್ಯೆ ಎಷ್ಟು; (ಪ್ಯಾಕೇಜ್-1) : ಬೆಂಗಳೂರು-ನಿಡಘಟ್ಟ ಹಾಗೂ ಪ್ಯಾಕೇಜ್-2 : ನಿಡಘಟ್ಟ-ಮೈಸೂರು ವಿಭಾಗವಾರು, ವರ್ಷವಾರು ಮಾಹಿತಿ ನೀಡುವುದು) | ರಾಷ್ಟ್ರೀಯ ಹೆದ್ದಾರಿ-275 ಬೆಂಗಳೂರು-ಮೈಸೂರು (Express Highway) ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಇವರ ಕಾರ್ಯವ್ಯಾಪ್ತಿಗೆ ಒಳಪಟ್ಟಿದ್ದು ಸದರಿ ಹೆದ್ದಾರಿಯಲ್ಲಿ ಮಾರ್ಚ್ 2023 ರಿಂದ ಇಲ್ಲಿಯವರೆಗೆ ಸಂಭವಿಸಿರುವ ಅಪಘಾತಗಳ ಕುರಿತು ಮಾಹಿತಿಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ. |

**Package-1 (Bangalore to Nidagatta)**

| Year | No. of Accidents | Fatal | Serious injury |
|---|---|---|---|
| 2023 | 345 | 33 | 107 |
| 2024 | 310 | 26 | 40 |
| 2025 | 210 | 17 | 38 |

**Package-2 (Nidagatta to Mysore)**

| Year | No. of Accidents | Fatal | Serious injury |
|---|---|---|---|
| 2023 | 278 | 77 | 4 |
| 2024 | 238 | 28 | 31 |
| 2025 | 293 | 34 | 91 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಹೆದ್ದಾರಿ ಸಂಖ್ಯೆ 275ರಲ್ಲಿ ವಾಹನಗಳ ಸಂಚಾರಕ್ಕೆ ಮುಕ್ತವಾದ ದಿನದಿಂದ ಈವರೆವಿಗೆ ಸಂಗ್ರಹಿಸಲಾದ ಟೋಲ್ ಶುಲ್ಕ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ರಾಷ್ಟ್ರೀಯ ಹೆದ್ದಾರಿ-275 ರಲ್ಲಿ ವಾಹನಗಳ ಸಂಚಾರಕ್ಕೆ ಮುಕ್ತವಾದ ದಿನದಿಂದ ಈವರೆವಿಗೆ ಸಂಗ್ರಹಿಸಲಾದ ಒಟ್ಟು ಟೋಲ್ ಶುಲ್ಕ ಮೊತ್ತದ ಮಾಹಿತಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಇವರು ಈ ಕೆಳಕಂಡಂತೆ ನೀಡಿರುತ್ತಾರೆ. |
| ಇ) | ಹೆದ್ದಾರಿಯ ಎಲ್ಲೆಲ್ಲಿ ಟೋಲ್ ಸಂಗ್ರಹ ಕೇಂದ್ರಗಳನ್ನು ನಿರ್ಮಿಸಲಾಗಿದೆ; ಈ ಟೋಲ್ ಸಂಗ್ರಹ ಕೇಂದ್ರಗಳಲ್ಲಿ ಸಂಗ್ರಹವಾದ ಟೋಲ್ ಮೊತ್ತ ಎಷ್ಟು: (ವರ್ಷವಾರು ಮಾಹಿತಿ ನೀಡುವುದು) | ರಾಷ್ಟ್ರೀಯ ಹೆದ್ದಾರಿ-275ರಲ್ಲಿ ನಿರ್ಮಿಸಿರುವ ಟೋಲ್ ಸಂಗ್ರಹ ಕೇಂದ್ರಗಳಲ್ಲಿ ಸಂಗ್ರಹವಾದ ಟೋಲ್ ಮೊತ್ತದ ಮಾಹಿತಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈ ಕೆಳಕಂಡಂತೆ ನೀಡಿರುತ್ತಾರೆ. |

Bangalore to Mysuru of NH-275 Amount in Crores

| Toll Plaza | 2022-23 | 2023-24 | 2024-25 | 2025-26 | Total |
|---|---|---|---|---|---|
| Kaniminike (LHS) Km23+900 | 4.08 | 92.35 | 100.17 | 85.54 | 282.14 |
| Sheshagirihalli (RHS) Km28+600 | 3.65 | 78.26 | 88.47 | 78.04 | 248.42 |
| Gananguru Km 116+500 (Both Side Plaza) | - | 83.24 | 132.85 | 109.14 | 325.23 |
| | 7.73 | 253.85 | 321.49 | 272.72 | 855.79 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಈ) | ರಾಷ್ಟ್ರೀಯ ಹೆದ್ದಾರಿ-275ರ ಹಾಗೂ ಅದರ ಎರಡು ಬದಿಯಲ್ಲಿರುವ ಸರ್ವೀಸ್ ರಸ್ತೆಯಲ್ಲಿ ಬಾಕಿ ಉಳಿದಿರುವ | ರಾಷ್ಟ್ರೀಯ ಹೆದ್ದಾರಿ-275ರ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಹೆಚ್ಚುವರಿ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು HAM ಯೋಜನೆಯಡಿ ಮೆ: ಬೆಂಗಳೂರು-ಮೈಸೂರು ಹೈವೇಸ್ |

| | | |
|---|---|---|
| | ನಾನಾ ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಪ್ರೈವೇಟ್ ಲಿಮಿಟೆಡ್ ಇವರಿಗೆ ಗುತ್ತಿಗೆ ವಹಿಸಲಾಗಿರುತ್ತದೆ ಪ್ರಸ್ತುತ ರಿಯಾಯಿತಿದಾರರಿಗೆ ಕಾಮಗಾರಿಯನ್ನು ಪ್ರಾರಂಭಿಸಲು Appointed date ನೀಡಬೇಕಾಗಿರುತ್ತದೆ. ಸದರಿ ರಸ್ತೆ ಸುರಕ್ಷತಾ ಕಾಮಗಾರಿಯೊಂದಿಗೆ ಹೆದ್ದಾರಿಯ ಒಂದು ಬದಿಯಲ್ಲಿ ಸರ್ವೀಸ್ ರಸ್ತೆಯನ್ನು ಮುಂದುವರೆಸಲು Provisions ಮಾಡಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಉ) | ಮಂಡ್ಯದ ತೂಬಿನಕೆರೆ ಸಮೀಪ ರಾಷ್ಟ್ರೀಯ ಹೆದ್ದಾರಿಯಿಂದ ಸರ್ವೀಸ್ ರಸ್ತೆಗೆ ಹೋಗಲು (ಪಾಂಡವಪುರಕ್ಕೆ ಹೋಗಲು) ಕಿರಿದಾಗಿ ಸ್ಥಳ ಬಿಟ್ಟು ಸಂಪರ್ಕ ಕಲ್ಪಿಸಿರುವುದರಿಂದ ಅಪಘಾತ ಸ್ಥಳವಾಗಿ ಬದಲಾಗಿದರೂ ಈ ಸ್ಥಳದಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಂಡು ವಿಶಾಲವಾಗಿ ಸ್ಥಳಾವಕಾಶ ಮಾಡಿಕೊಡುವುದು ಮತ್ತು ನಾಮಫಲಕ ಅಳವಡಿಸುವ ಕುರಿತು ಸರ್ಕಾರದ ಕ್ರಮವೇನು? | ತೂಬಿನಕೆರೆ ಬಳಿ ಸರ್ವೀಸ್ ರಸ್ತೆಯನ್ನು ಗುತ್ತಿಗೆ ಕರಾರಿನನ್ವಯ ನಿರ್ಮಿಸಲಾಗಿರುತ್ತದೆ ಹಾಗೂ ಸದರಿ ಭಾಗದಲ್ಲಿ ರಸ್ತೆ ಸುರಕ್ಷತಾ ಕ್ರಮಗಳಾದ ರೋಡ್ ಹಂಪ್ಸ್, ಸೈನ್ ಬೋರ್ಡ್ಸ್‌ಗಳನ್ನು ಅಳವಡಿಸಲಾಗಿರುತ್ತದೆ. ಇದರೊಂದಿಗೆ ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಮೆ: ಬೆಂಗಳೂರು-ಮೈಸೂರು ಹೈವೇಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಿದ್ದು, ತೂಬಿನಕೆರೆ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಬಳಕೆದಾರರ ಹಿತದೃಷ್ಟಿಯಿಂದ ಒಂದೇ ದಿಕ್ಕಿನಲ್ಲಿ ಚಲಿಸಲು ಪ್ರವೇಶ ಮತ್ತು ನಿರ್ಗಮನ ಸೌಲಭ್ಯಗಳನ್ನು ಅಗಲೀಕರಣದೊಂದಿಗೆ ಮಾಡಲಾಗುತ್ತದೆ. ಹಾಗೂ ಸದರಿ ಸೌಲಭ್ಯವನ್ನು ಒದಗಿಸಿದ ನಂತರ ಪ್ರಸ್ತುತ ನಿರ್ಮಿಸಿರುವ ಪ್ರವೇಶ ಮತ್ತು ನಿರ್ಗಮನವನ್ನು ಮುಚ್ಚಲಾಗುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 479 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು